**<u>ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ</u>**

<u>ಅಸಲು ದಾವಾ ಸಂಖ್ಯೆ 65/2016 D.W.-4</u>

ಈ ದಿನ ದಿಃ13.12.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**<u>ಮುಂದುವರೆದ ಮುಖ್ಯ ವಿಚಾರಣೆಃ</u>** <u>ಪ್ರತಿವಾದಿ ಪರ ವಕೀಲರಿಂದಃ</u>

ನಾನು ಲಕ್ಷ್ಮೀ ನಾರಾಯಾಣ್ ರವರ ಕಚೇರಿಯಲ್ಲಿ ಸುಮಾರು 30 ವರ್ಷಗಳಿಂದ ಕೆಲಸ ಮಾಡುತ್ತಿದ್ದು ಸದರಿಯವರು ಈಗ ಜೀವಂತ ಇರುವುದಿಲ್ಲ. ನಾನು ಸದರಿಯವರ ಸಹಿಯನ್ನು ನೋಡಿ ಗುರುತಿಸಬಲ್ಲೇ. ಸಾಕ್ಷಿಗೆ ನಿಡಿ69 ನ್ನು ತೋರಿಸಲಾಗಿ ಸದರಿ ದಾಖಲೆಯಲ್ಲಿನ ಸದರಿ ಲಕ್ಷ್ಮೀ ನಾರಾಯಾಣ್ ರವರ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿಯನ್ನು ನಿಡಿ69 ಡಿ ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು</u>** ಃ ವಾದಿ ಪರ ವಕೀಲರಿಂದಃ

ನನ್ನ ಸ್ವಂತ ಊರು ಗೋಪಾಲ ಗುಸೇನಹಳ್ಳಿ. ನನಗೆ ಪರಮೇಶ್ವರಪ್ಪರ ಮೂಲಕ ಬಸಪ್ಪನವರು ಪರಿಚಯ. ಬಸಪ್ಪನವರ ಸ್ವಂತ ಊರು ದೋರನಾಳು ಗ್ರಾಮ. ಸದರಿಯವರು ದೋರನಾಳು ಗ್ರಾಮಕ್ಕೆ ಬರುವುದಕ್ಕೂ ಮುಂಚೆ ಸದರಿಯವರು ಎಲ್ಲಿ ವಾಸವಿದ್ದರು ಎಂದು ನನಗೆ ಗೊತ್ತಿಲ್ಲ. 30 ವರ್ಷಗಳಿಂದ ನಾನು ಸದರಿಯವರ ಕಚೇರಿಯಲ್ಲಿ ಕೆಲಸ ಮಾಡುತ್ತಿರುವ ಬಗ್ಗೆ ಯಾವುದೇ ದಾಖಲೆ ಇಲ್ಲ, ಸಾಕ್ಷಿ ಮುಂದುವರೆದು ನಾನು ಅವರ ಕಚೇರಿಯಲ್ಲಿ ಬೆರಳಚ್ಚುಗಾರನಾಗಿ ಕೆಲಸ ಮಾಡುತ್ತಿದ್ದೆನು ಎಂದು ನುಡಿಯುತ್ತಾರೆ. 2015 ರಲ್ಲಿ ಸದರಿ ಬಸಪ್ಪನವರಿಗೆ 85 ವರ್ಷಕ್ಕಿಂತ ಜಾಸ್ತಿ ವಯಸ್ಸಾಗಿತ್ತು ಎಂದರೆ ಸರಿ. ಸದರಿಯವರು ಕದೋರನಾಳು ಗ್ರಾಮದಲ್ಲಿ ವಾಸವಿದ್ದರು ಎಂದರೆ ಪಂಪ ಮಹಾಕವಿ ರಸ್ತೆ ತರೀಕೆರೆಯಲ್ಲಿ ವಾಸವಿದ್ದರು ಎಂದು ನುಡಿಯುತ್ತಾರೆ. ಪಾರ್ಶ್ವವಾಯು ಕಾಯಿಲೆಯಿಂದ ನರಳುತ್ತಿದ್ದರು ಎಂದರೆ ಸರಿ. ಅವರಿಗೆ ವಯಸ್ಸಾಗಿದ್ದ ಕಾರಣ ಕಿವಿ ಸರಿಯಾಗಿ ಕೇಳುತ್ತಿರಲಿಲ್ಲ ಹಾಗೂ ಕಣ್ಣು ಸರಿಯಾಗಿ ಕಾಣುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿಯವರಿಗೆ ಬಿ ಪಿ ಹಾಗೂ ಸಕ್ಕರೆ ಕಾಯಿಲೆ ಇತ್ತು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಅವರಿಗೆ ವಯೋಮಾನದ ದೃಷ್ಟಿಯಿಂದ ಅವರಿಗೆ ಏನು ಮಾಡುತ್ತಿದ್ದೇನೆಂದು ಅರಿವು ಇರಲಿಲ್ಲ ಎಂದರೆ ಸರಿಯಲ್ಲ. 2015 ರಲ್ಲಿ ನಾನು ಸದರಿ

ಬಸಪ್ಪನವರ ಮನೆಗೆ ಹೋಗಿದ್ದು ನನಗೆ ನಿಖರವಾದ ದಿನಾಂಕ ಗೊತ್ತಿಲ್ಲ. ನಾನು ಅವರ ಮನೆಗೆ ಸಂಜೆ 05.30 ರ ನಂತರ ಹೋಗಿರುತ್ತೇನೆ. ಸದರಿ ಬಸಪ್ಪನವರಿಗೆ ಎಷ್ಟು ಜಮೀನು ಎಷ್ಟು ನಿವೇಶನಗಳು ಮತ್ತು ಎಷ್ಟು ಮನೆಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ಸದರಿ ಬಸಪ್ಪನವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ಸದರಿ ಬಸಪ್ಪನವರು ಯಾರು ಯಾರಿಗೆ ಎಷ್ಟು ಜಮೀನು ಎಷ್ಟು ನಿವೇಶನ ಹಂಚಿರುತ್ತಾರೆಂದು ನನಗೆ ಗೊತ್ತಿಲ್ಲ. ಪರಮೇಶ್ವರಪ್ಪ ನವರು ಲಕ್ಷ್ಮಿ ನಾರಾಯಣ್ ರವರಿಗೆ ದಾಖಲೆಯನ್ನು ಕೊಟ್ಟಿದ್ದು ಯಾವ ಯಾವ ದಾಖಲೆ ಎಂದು ನನಗೆ ಗೊತ್ತಿಲ್ಲ. ನನಗೆ ಯಾವುದೇ ದಾಖಲೆಯನ್ನು ಪರಮೇಶ್ವರಪ್ಪ ಕೊಟ್ಟಿರುವುದಿಲ್ಲ. ನಿಡಿ69 ರ ಪತ್ರವನ್ನು 2 ದಿನ ಮುಂಚೆ ಸದರಿ ಲಕ್ಷ್ಮಿ ನಾರಾಯಣ್ ರವರು ತಯಾರು ಮಾಡಿದ್ದರು. ನಿಡಿ69 ರ ದಾಖಲೆಗೆ ಸಂಗತಿಗಳನ್ನು ಪರಮೇಶ್ವಪ್ಪ ಹೇಳಿರುತ್ತಾರೆ, 4 ನೇ ಪ್ರತಿವಾದಿ ಹೇಳಿರುವುದಿಲ್ಲ. ನಿಡಿ69 ರ ದಾಖಲೆಯನ್ನು ಬಿಳಿ ಕಾಗದದ ಮೇಲೆ ಬರೆದಿರುತ್ತಾರೆ. ನಿಡಿ69 ರ ದಾಖಲೆ ಎಷ್ಟು ಪುಟ ಇದೆ ಎಂದರೆ 5-6 ಪುಟ ಇದೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ಕಂಪ್ಯೂಟರ್ ಮೂಲಕ ಟೈಪ್ ಮಾಡಲಾಗಿದೆ. ಸದರಿ ದಾಖಲೆಗೆ ಬಸಪ್ಪನವರು ಎಷ್ಟು ಕಡೆ ಸಹಿ ಮಾಡಿರುತ್ತಾರೆಂದರೆ ಎಲ್ಲಾ ಪುಟಗಳಲ್ಲಿ ಮಾಡಿರುತ್ತಾರೆ ಎಷ್ಟು ಕಡೆ ಎಂದು ನನಗೆ ಗೊತ್ತಿಲ್ಲ. ನಿಡಿ69 ರ 2 ನೇ ಪುಟಕ್ಕೆ ನಾನು ಮತ್ತು ಪರಮೇಶ್ವಪ್ಪ ಸಹಿ ಹಾಕಿರುತ್ತೇವೆ. ನಿಡಿ69 ರ 1 ನೇ ಪುಟದ ಹಿಂಬದಿಗೆ ಬಸಪ್ಪನವರು ತನ್ನ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆ. ನಿಡಿ69 ನ್ನು ಸಾಕ್ಷಿಗೆ ತೋರಿಸಲಾಗಿ ಸದರಿ 3 ನೇ ಸಾಲನ್ನು ನಾನೇ ಬರೆದಿರುತ್ತೇನೆ. ಸದರಿ ಸಾಲಿನ ಬರವಣಿಗೆಗೆ ನಾನು ಬಸಪ್ಪನವರ ಸಹಿಯನ್ನು ಪಡೆದಿರುವುದಿಲ್ಲ. ಸದರಿ ಸಾಲನ್ನು ನಾನು ಉಪ ನೋಂದಣಾದಿಕಾರಿಗಳ ಮುಂದೆ ಬರೆದ ಕಾರಣ ಸದರಿ ಬರವಣಿಗೆಗೆ ಬಸಪ್ಪನವರ ಸಹಿಯನ್ನು ಪಡೆಯಲಿಲ್ಲ. ನಿಡಿ69 ರ ದಾಖಲೆಗೆ ಸದರಿ ದಾಖಲೆಯನ್ನು ಮನೆಗೆ ತೆಗೆದುಕೊಂಡು ಹೋದ ನಂತರ ಬಸಪ್ಪನವರ ಹೆಬೆಟ್ಟಿನ ಗುರುತನ್ನು ಹಾಕಿಸಲು ನನಗೆ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಉಪ ನೋಂದಣಾಧಿಕಾರಿಗಳು ಇದ್ದ ಕಾರಣ ನಾವು ಹಾಕಿಸಿರಲಿಲ್ಲ ಎಂದು ನುಡಿಯುತ್ತಾರೆ. ಸದರಿ ಬಸಪ್ಪನಿಗೆ ಎಲ್ಲಾ ಮಕ್ಕಳ ಮೇಲೆ ಪ್ರೀತಿ ವಿಶ್ವಾಸ ಇದ್ದ ಕಾರಣ ಅವರಿಗೆ ಮರಣ ಶಾಸನ ಬರೆಯುವ ಇಚ್ಚೆ ಇರಲಿಲ್ಲ ಎಂದರೆ ಸರಿಯಲ್ಲ. ಬಸಪ್ಪನವರು ದೋರನಾಳು ಗ್ರಾಮದಲ್ಲಿ ವಾಸವಿದ್ದು ಅವರ ಯೋಗಕ್ಷೇಮವನ್ನು 3 ನೇ ಪ್ರತಿವಾದಿ

ಮತ್ತು ಅವರ ಹೆಂಡತಿ ನೋಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿಯ ಹೆಂಡತಿ ಯಶೋದಮ್ಮ ನಾಗತಿ ಪ್ರೌಢ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. 4 ನೇ ಪ್ರತಿವಾದಿ ರಂಭಾಪುರಿ ಪ್ರಥಮ ದರ್ಜೆ ಕಾಲೇಜು ಬಿ ಆರ್ ಪಿ ಯಲ್ಲಿ ಮುಖ್ಯ ಗ್ರಂಥಪಾಲಕರಾಗಿ ಕೆಲಸ ನಿರ್ವಹಿಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿ ಮತ್ತು ಅವರ ಹೆಂಡತಿ ಕೆಲಸದಲ್ಲಿ ಇದ್ದ ಕಾರಣ ಯಾವತ್ತು ಸಹ ಅವರು ಬಸಪ್ಪನವರ ಯೇಗಕ್ಷೇಮ ನೋಡಿಲ್ಲ ಎಂದರೆ ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿಯು ನಿಡಿ69 ರಲ್ಲಿ ಹೆಚ್ಚಿನ ಆಸ್ತಿಯನ್ನು ಬರೆದುಕೊಂಡಿರುತ್ತಾರೆ ಎಂದರೆ ಸಾಕ್ಷಿ ಬಸಪ್ಪನವರು ಹೇಳಿದ ಹಾಗೇ ಬರೆಯಲಾಗಿದೆ ಎಂದು ನುಡಿಯುತ್ತಾರೆ. ನನಗೆ ನಿಡಿ69 ರ ದಾಖಲೆಯ ಸಂಗತಿಗಳ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರು ಸಹ 4 ನೇ ಪ್ರತಿವಾದಿ ಮತ್ತು ಅವರ ಹೆಂಡತಿಯ ಮಾತು ಕೇಳಿ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಉಪ ನೋಂದಣಾಧಿಕಾರಿಗಳು 4 ನೇ ಪ್ರತಿವಾದಿಯ ಮನೆಗೆ ಬಂದು ಬಸಪ್ಪನವರ ಹೆಬೆಟ್ಟಿನ ಗುರುತನ್ನು ಪಡೆದಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದೋರನಾಳು ಗ್ರಾಮದ ಯಾವುದೇ ವ್ಯಕ್ತಿಯನ್ನು ನಿಡಿ69 ಕ್ಕೆ ಸಾಕ್ಷಿದಾರರಾಗಿ ಸಹಿ ಪಡೆದಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿಯ ಮಾತುಕೇಳಿ ಅವರಿಗೆ ಅನುಕೂಲ ಆಗಲೇಂದು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು** ಃ 1 ರಿಂದ 3 ನೇ ಪ್ರತಿವಾದಿ ಪರ ವಕೀಲರಿಂದಃ

ಪತ್ರ ಬರವಣಿಗೆಯನ್ನುಮಾಡಲು ನನಗೆ ಪರವಾನಿಗೆ ಇಲ್ಲ ಎಂದರೆ ಸರಿ. ನನಗೆ ಯಾವ ದಿನಾಂಕ ಪ್ರಥಮ ಬಾರಿಗೆ 4 ನೇ ಪ್ರತಿವಾದಿಯ ಮನೆಗೆ ಹೋಗಿರುತ್ತೇನೆಂದು ದಿನಾಂಕ ನೆನಪಿಲ್ಲ. ನಾನು ಒಂದು ಭಾರಿ ಮಾತ್ರ 4 ನೇ ಪ್ರತಿವಾದಿಯ ಮನೆಗೆ ಹೋಗಿರುತ್ತೇನೆ. 2-3 ದಿನಗಳ ಮುಂಚೆ ನಾನು ಮತ್ತು ಪರಮೇಶ್ವರಪ್ಪ ಬಸಪ್ಪನವರ ಬಳಿ ಹೋಗಿ ವಿಲ್ ನ ಮಾಹಿತಿಯನ್ನು ಪಡೆದು ಬಂದಿರುತ್ತೇವೆ. ನಾವು ಬಸಪ್ಪನವರ ಬಳಿ ಹೋದಾಗ ಮನೆಯಲ್ಲಿ ಯಾರು ಇರಲಿಲ್ಲ ಇಬ್ಬರು ಮಕ್ಕಳು ಮಾತ್ರ ಇದ್ದರು. ನಾವು ಮಾಹಿತಿಯನ್ನು ಪಡೆಯಲು ಹೋದಾಗ ಬೆಳಗ್ಗೆ 10.30 ರ ಸಮಯ ಆಗಿತ್ತು. ನಾವು ಹೋದಾಗ ಬಾಗಿಲು ತೆಗೆದಿತ್ತು. ನಾನು ಮಾಹಿತಿ ಪಡೆಯಲು ಹೋದಾಗ ಯಾವುದೇ ಬರವಣಿಗೆಯನ್ನು ಮಾಡಿರುವುದಿಲ್ಲ. ಬಸಪ್ಪನವರು ಯಾವತ್ತು ಸಹ ಲಕ್ಷ್ಮೀ ನಾರಾಯಣ ರವರ ಕಚೇರಿಗೆ ಬಂದಿಲ್ಲ ಹಾಗೂ ಮಾಹಿತಿಯನ್ನು ನೀಡಿರುವುದಿಲ್ಲ ಎಂದರೆ ಸರಿ. ಸಾಕ್ಷಿ

ಮುಂದುವರೆದು ನಾವು ಮಾಹಿತಿಯನ್ನು ಪಡೆದು ಬಂದಿರುತ್ತೇವೆಂದು ನುಡಿಯುತ್ತಾರೆ. ನಿಡಿ69 ರ ದಾಖಲೆಯಲ್ಲಿನ ಆಸ್ತಿಗಳ ಚಕ್ಕುಬಂದಿಯನ್ನು ಪರಮೇಶ್ವರಪ್ಪನವರು ನೀಡಿರುತ್ತಾರೆ. ಸದರಿ ಆಸ್ತಿಗಳ ಮಾಹಿತಿಯನ್ನು ಪರಮೇಶ್ವರಪ್ಪನವರು ನೀಡಿರುತ್ತಾರೆ ಎಂದರೆ ಸರಿ.

ಸದರಿ ಬಸಪ್ಪನವರು ತನ್ನ ಆರೋಗ್ಯ ಸರಿ ಇಲ್ಲದ ಕಾರಣ ನಾನು ನೋಂದಣಿ ಕಚೇರಿಗೆ ಬರಲು ಸಾದ್ಯ ಇಲ್ಲ ಎಂದು ಲಿಖಿತವಾಗಿ ಪತ್ರವನ್ನು ಪರಮೇಶ್ವರಪ್ಪನ ಬಳಿ ಕೊಟ್ಟಿದ್ದರು. ನಿಡಿ69 ರ ದಾಖಲೆಯನ್ನು ನೋಂದಣಿಗಾಗಿ ಪರಮೇಶ್ವರಪ್ಪನವರು ಹಾಜರು ಮಾಡಿರುತ್ತಾರೆ. ಸಂಜೆ 04.30 ರ ಸಮಯದಲ್ಲಿ ನಿಡಿ69 ರ ದಾಖಲೆಯನ್ನು ನೊಂದಣಿಗಾಗಿ ಹಾಜರುಪಡಿಸಿರುತ್ತಾರೆ. ಆಗ ನಾನು ಸಹ ಪರಮೇಶ್ವರಪ್ಪನವರ ಜೊತೆಯಲ್ಲಿ ಇದ್ದೆ. ನನ್ನನ್ನು ಕುಮಾರ್ ಎಂಬ ಅಡ್ಡ ಹೆಸರಿನಿಂದಲೂ ಕರೆಯುತ್ತಾರೆ ಎಂದರೆ ಸರಿ.

4 ನೇ ಪ್ರತಿವಾದಿಯು ಪರಮೇಶ್ವರಪ್ಪನವರ ಜೊತೆ ಸೇರಿ ನಿಡಿ69 ರ ದಾಖಲೆಯನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಬಸಪ್ಪನವರು ಯಾವುದೇ ಮಾಹಿತಿಯನ್ನು ನಿಡಿ69 ರ ದಾಖಲೆಗೆ ಪರಮೇಶ್ವರಪ್ಪನವರ ಬಳಿ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಯಾವತ್ತು ಸಹ ಬಸಪ್ಪನವರ ಮನೆಗೆ ಹೋಗಿರವುದಿಲ್ಲ ಎಂದರೆ ಸರಿಯಲ್ಲ. ಬಸಪ್ಪನವರು ಯಾವುದೇ ವಿಲ್ ಅನ್ನು ಮಾಡಲು ಮಾಹಿತಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು 4 ನೇ ಪ್ರತಿವಾದಿ ಮತ್ತು ಪರಮೇಶ್ವರಪ್ಪನವರ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.

(ಸಂತೋಷ್ ಕುಮಾರ್ ಪಿ. ಎಸ್.)
ಸಿವಿಲ್ ನ್ಯಾಯಾಧೀಶರು ಮತ್ತು ಹೆ.ಪ್ರ.ದ.ನ್ಯಾ.ದಂ.ರವರು,
ತರೀಕೆರೆ.

**ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ**
ಅಸಲು ದಾವಾ ಸಂಖ್ಯೆ 65/2016 D.W.-3

ಈ ದಿನ ದಿಃ13.12.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ** ಪ್ರತಿವಾದಿ ಪರ ವಕೀಲರಿಂದಃ

ಮೃತ ಬಸಪ್ಪ ನವರು ನಿಡಿ69 ಕ್ಕೆ ನನ್ನ ಸಮಕ್ಷಮ ತನ್ನ ಎಡಗೈ ಹೆಬ್ಬೆಟ್ಟಿನ ಗುರುತನ್ನು ಹಾಕಿದ ಬಗ್ಗೆ ಅದನ್ನು ಗುರುತಿಸಿ ನಾನು ನನ್ನ ಸಹಿಯನ್ನು ಮಾಡಿರುತ್ತೇನೆ. ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ.69 ಸಿ ಎಂದು ಗುರುತಿಸಲಾಯಿತು.

**ಪಾಟೀ ಸವಾಲು** ಃ ವಾದಿ ಪರ ವಕೀಲರಿಂದಃ

ನನ್ನ ಸ್ವಂತ ಊರು ಮುದುಗುಂಡಿ. 1987 ರಿಂದ 2017 ರವರೆಗೆ ನಾನು ಯಶೋಧಮ್ಮನಾಗತಿ ಶಾಲೆಯಲ್ಲಿ ನಾನು ಅಟೆಂಡರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನಾನು ಈಗ ಮತ್ತೊಡ್ ಗ್ರಾಮದಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು 4 ನೇ ಪ್ರತಿವಾದಿಯ ಹೆಂಡತಿಯವರ ಮನೆಗೆ 4 ನೇ ಪ್ರತಿವಾದಿಯು ನನಗೆ ಸ್ನೇಹಿತರಾದ ಕಾರಣ ಹೋಗುತ್ತಿದ್ದೆ.

ಬಸಪ್ಪನವರ ಮೂಲ ಊರು ದೊರನಾಳು ಗ್ರಾಮ. ಬಸಪ್ಪನವರ ಮೂಲ ಊರು ಮಂಗೇನಹಳ್ಳಿ ಎಂದರೆ ನನಗೆ ಗೊತ್ತಿಲ್ಲ. ಬಸಪ್ಪನವರಿಗೆ ಮಂಗೇನಹಳ್ಳಿಯಲ್ಲಿ ಪಿತ್ರಾರ್ಜಿತ ಆಸ್ತಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಗಳನ್ನು ಅವರ ಸಹೋದರರಿಗೆ ವಹಿಸಿಕೊಟ್ಟು 7 ಎಕರೆ 20 ಗುಂಟೆ ಜಮೀನನ್ನು ತರೀಕೆರೆಯಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಬಸಪ್ಪನವರಿಗೆ 4 ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು. ಶಂಕರಪ್ಪ ಎನ್ನುವವರು ಮುಂಡ್ರೆ ಗ್ರಾಮದಲ್ಲಿ ಇರುತ್ತಾರೆ, ಮಲ್ಲೇಗೌಡ ಉಡೆವಗ್ರಾಮದಲ್ಲಿ ಇರುತ್ತಾರೆ, ಚಂದ್ರಶೇಖರ್ ರವರು ತರೀಕೆರೆಯಲ್ಲಿ ಇರುತ್ತಾರೆ ಹಾಗೂ ದೇವೆಂದ್ರಪ್ಪ ರವರು ದೋರನಾಳು ಗ್ರಾಮದಲ್ಲಿ ಇರುತ್ತಾರೆ. ಅವರ ಹೆಣ್ಣು ಮಕ್ಕಳ ಮದುವೆಯಾಗಿದ್ದು ಅವರು ಎಲ್ಲಿ ಇರುತ್ತಾರೆಂದು ನನಗೆ ಗೊತ್ತಿಲ್ಲ. ಬಸಪ್ಪನವರಿಗೆ ಎಲ್ಲಾ ಮಕ್ಕಳ ಮೇಲೆ ಸಮನಾದ ಪ್ರೀತಿ ವಿಶ್ವಾಸ ಇತ್ತು ಎಂದರೆ ಸರಿ. 2015 ರಲ್ಲಿ ಬಸಪ್ಪನವರಿಗೆ 80 ವರ್ಷ ವಯಸ್ಸಾಗಿತ್ತು ಎಂದರೆ ಸರಿ. ಸದರಿಯವರು ಪಾರ್ಶುವಾಯು ರೋಗದಿಂದ ನರಳುತ್ತಿದ್ದರು ಎಂದರೆ ಸರಿ. ಅವರಿಗೆ

ಕಿವಿ ಕೇಳಿಸುತ್ತಿರಲಿಲ್ಲ ಹಾಗೂ ಕಣ್ಣು ಕಾಣಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿಯವರಿಗೆ ಬಿಪಿ ಹಾಗೂ ಸಕ್ಕರೆ ಖಾಯಿಲೆ ಸಹ ಇತ್ತು ಎಂದರೆ ಸರಿ. ಹಾಗಾಗಿ ಸದರಿಯವರಿಗೆ ಓಡಾಡಲು ಸಾಧ್ಯ ಆಗುತ್ತಿರಲಿಲ್ಲ ಹಾಗೂ ಜ್ಞಾನ ಇರಲಿಲ್ಲ ಎಂದರೆ ಸಾಕ್ಷಿ ಜ್ಞಾನ ಇತ್ತು ಎಂದು ನುಡಿಯುತ್ತಾರೆ.

ನಾನು ದಿಃ 15.05.2015 ರಂದು ಸದರಿ ಬಸಪ್ಪನವರ ಮನೆಗೆ ಹೋಗಿದ್ದೆನು. ಸದರಿಯವರಿಗೆ 7 ಎಕರೆ 20 ಗುಂಟೆ ಜಮೀನು ಇದ್ದು ಅವರಿಗೆ ಇದ್ದ ನಿವೇಶನದ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಸದರಿ ದಿನದಂದು ಹೋಗುವ ಮುಂಚೆಯಿಂದಲು ಸಹ ಅವರು ತರೀಕೆರೆಯಲ್ಲಿ 4 ನೇ ಪ್ರತಿವಾದಿಯ ಜೊತೆ ವಾಸವಿದ್ದರು. ಸದರಿಯವರು ಯಾವತ್ತು ಸಹ ತರೀಕೆರೆಯಲ್ಲಿ ವಾಸ ಇರಲ್ಲಿಲ್ಲ ಎಂದರೆ ಸರಿಯಲ್ಲ. ನನ್ನ ಹೆಂಡತಿಯ ಜನ್ಮ ದಿನಾಂಕ ನನಗೆ ಗೊತ್ತಿಲ್ಲ. ನಿಡಿ69 ಕ್ಕೆ 4 ನೇ ಪ್ರತಿವಾದಿ ಮಾಹಿತಿಯನ್ನು ನೀಡಿದ್ದರು ಎಂದರೆ ಸಾಕ್ಷಿ ಸದರಿ ಬಸಪ್ಪ ನವರೇ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ದಿಃ 15.05.2015 ರಂದು ನಿಡಿ69 ರ ನೋಂದಣೆಗಾಗಿ ದಾಖಲೆಯನ್ನು ಸಲ್ಲಿಸಿರುತ್ತೇವೆ. ನಾನು ಸದರಿ ದಿನದಂದು ಮಧ್ಯಾಹ್ನ ನೋಂದಣಿ ಕಚೇರಿಗೆ ಹೋಗಿರುತ್ತೇನೆ. ನನ್ನ ಶಾಲೆ ಮುಗಿದ ನಂತರ ಸಂಜೆ 04.20 ರ ನಂತರ ನಾನು ನೋಂದಣಿ ಕಚೇರಿಗೆ ಹೋಗಿರುತ್ತೇನೆ. ನಿಡಿ69 ನ್ನು ಬಿಳಿ ಕಾಗದದ ಮೇಲೆ ಬರೆದಿರುತ್ತಾರೆ. ಸದರಿ ಹಾಳೆಗಳನ್ನು 4 ನೇ ಪ್ರತಿವಾದಿ ತಂದು ಕೊಟ್ಟಿರುವುದಿಲ್ಲ. ನಿಡಿ69 ರಲ್ಲಿ ಎಷ್ಟು ಪುಟಗಳು ಇವೆ ಎಂದು ನಾನು ನೋಡಿಲ್ಲ. ನಿಡಿ69 ರ ದಾಖಲೆಯು ಕಂಪ್ಯೂಟರ್ ಮೂಲಕ ಮುದ್ರಣವಾಗಿದೆ. ಸದರಿ ಬಸಪ್ಪ ಸದರಿ ದಾಖಲೆಗೆ ಸುಮಾರು 12 ಕಡೆ ತನ್ನ ಹೆಬೆಟ್ಟಿನ ಗುರುತನ್ನು ಹಾಕಿರುತ್ತಾರೆ. ನಿಡಿ69 ಕ್ಕೆ ಸಾಕ್ಷಿದಾರರಾಗಿ ನಾನು, ಪರಮೇಶ್ವರಯ್ಯ ಮತ್ತು ಹೋಮ್ಯನಾಯ್ಕ ಸಹಿ ಮಾಡಿರುತ್ತೇವೆ. ನಿಡಿ69 ರ 2 ನೇ ಪುಟದಲ್ಲಿ ನಾನು ಮತ್ತು ಬಸಪ್ಪ ನವರು ಸಹಿ ಮಾಡಿರುತ್ತೇವೆ. ಅದೇ ರೀತಿ 1 ನೇ ಪುಟದ ಹಿಂಬದಿಯಲ್ಲಿ ನಾನು ಸಹಿ ಮಾಡಿದ್ದು ಬಸಪ್ಪ ನವರು ಹೆಬೆಟ್ಟಿನ ಗುರುತನ್ನು ಹಾಕಿರುತ್ತಾರೆ. ಸಂಜೆ 05.30 ಕ್ಕೆ ನಿಡಿ69 ರ ದಾಖಲೆಯು ತಯಾರಾಗಿರುತ್ತದೆ. ನಿಡಿ.69 ರ ದಾಖಲೆ ಸಾಕ್ಷಿಗೆ ತೋರಿಸಲಾಗಿ 1 ನೇ ಪುಟದಲ್ಲಿನ 3 ನೇ ಸಾಲನ್ನು ಯಾರು ಬರೆದಿರುತ್ತಾರೆ ಎಂದರೆ ಸದರಿ ನೋಂದಣಿ ಕಚೇರಿಯಲ್ಲಿನ ಸಹಾಯಕರು ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಸಾಲಿಗೆ ಬಸಪ್ಪ ನವರು ತನ್ನ ಹೆಬ್ಬೆಟ್ಟಿನ ಗುರುತನ್ನು ಹಾಕಿರುವುದಿಲ್ಲ. ದೋರನಾಳು ಗ್ರಾಮದಲ್ಲಿ

ಬಸಪ್ಪ ನವರು ಇರುವಾಗ ಆಸ್ಪತ್ರೆಗಾಗಿ ಎಂದು ಅವರನ್ನು ಕರೆದುಕೊಂಡು ಬಂದು ನಿಡಿ69 ನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಡಿ69 ರ ಸಂಗತಿಗಳು ಸದರಿ ಬಸಪ್ಪನವರಿಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸದರಿ ಬಸಪ್ಪನವರನ್ನು 3 ನೇ ಪ್ರತಿವಾದಿ ಮತ್ತು ಅವರ ಹೆಂಡತಿ ದೋರನಾಳು ಗ್ರಾಮದಲ್ಲಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯ ಹೆಂಡತಿ ಮತ್ತು ನಾನು ಒಂದೇ ಶಾಲೆಯಲ್ಲಿ ಕೆಲಸ ಮಾಡುತಿತದ್ದ ಕಾರಣ 4 ನೇ ಪ್ರತಿವಾದಿ ಹೇಳಿದಂತೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಉಪ ನೋಂದಣಾಧಿಕಾರಿಗಳು 4 ನೇ ಪ್ರತಿವಾದಿ ಮತ್ತು ಅವರ ಹೆಂಡತಿಯ ಮನೆಗೆ ಬಂದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 4 ನೇ ಪ್ರತಿವಾದಿಯ ಹೆಂಡತಿ ಪಾಲಾಕ್ಷಮ್ಮ ಸಹ ಶಿಕ್ಷಕರಾಗಿ ಸದರಿ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದರು. 4 ನೇ ಪ್ರತಿವಾದಿಯು ದೋರನಾಳು ಗ್ರಾಮದಲ್ಲಿನ ಕುವೆಂಪು ವಿಶ್ವವಿದ್ಯಾನಿಲಯದಲ್ಲಿನ ಕಾಲೇಜಿನಲ್ಲಿ ಗ್ರಂಥಪಾಲಕರಾಗಿ ಕೆಲಸ ಮಾಡುತ್ತಿದ್ದರು. ಸದರಿಯವರು ರಂಭಾಪುರಿ ಪ್ರಥಮ ದರ್ಜೆ ಕಾಲೇಜು ಬಿ ಆರ್ ಪಿ ಯಲ್ಲಿ ಮುಖ್ಯ ಗ್ರಂಥಪಾಲಕರಾಗಿ ಕೆಲಸ ನಿರ್ವಹಿಸುತ್ತಿದ್ದರು ಎಂದರೆ ಸರಿ. ಸದರಿಯವರು ತರೀಕೆರೆಯಿಂದ ಸದರಿ ಕಾಲೇಜಿಗೆ ಬಸ್ಸಿನಲ್ಲಿ ಹೋಗುತ್ತಿದ್ದರು ಎಂದರೆ ಸಾಕ್ಷಿ ಬೈಕ್ ನಲ್ಲಿ ಓಡಾಡುತ್ತಿದ್ದರು ಎಂದು ನುಡಿಯುತ್ತಾರೆ. ತರೀಕೆರೆಯಿಂದ ಬಿ ಆರ್ ಪಿ ಗೆ ಒಂದುವರೆ ಯಿಂದ ಎರಡು ಗಂಟೆ ಪ್ರಯಾಣ ಸಮಯ ಹಿಡಿಯುತ್ತದೆ ಎಂದರೆ ಸರಿಯಲ್ಲ. ಹಾಗಾಗಿ ಸದರಿಯವರು ಬೆಳಗ್ಗೆ 08.30 ಕ್ಕೆ ತರೀಕೆರೆ ಬಿಡಬೇಕಾಗಿತ್ತು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿ ಮತ್ತು ಅವರ ಹೆಂಡತಿ ಕೆಲಸದಲ್ಲಿ ಇದ್ದ ಕಾರಣ ಬಸಪ್ಪನವರನ್ನು ಅವರು ನೋಡಿಕೊಳ್ಳಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯು ನಿಡಿ69 ರ ದಾಖಲೆಯನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನಿಡಿ69 ರಲ್ಲಿ ಅವರ 3 ನೇ ಮಗನಿಗೆ 3 ಎಕರೆ 20 ಗುಂಟೆ ಮತ್ತು 4 ನೇ ಮಗನಿಗೆ 1 ಎಕರೆ 20 ಗುಂಟೆ ಮತ್ತು ಹೆಣ್ಣು ಮಕ್ಕಳಿಗೆ ತಲಾ 5 ಗುಂಟೆ ಜಮೀನು ಬಂದಿದ್ದು ಅವರ ಹೆಸರುಗಳನ್ನು ನಿಡಿ69 ರಲ್ಲಿ ಹೇಳಿದಂತೆ ನನಗೆ ಹೇಳಲು ಆಗುವುದಿಲ್ಲ. 4 ನೇ ಪ್ರತಿವಾದಿಗೆ ನಿಡಿ69 ರಲ್ಲಿ ಹೆಚಿಚನ ಆಸ್ತಿ ನೀಡಿರುತ್ತಾರೆಂದರೆ ಸಾಕ್ಷಿ ಅವರು ನನ್ನನ್ನು ನೋಡಿಕೊಂಡ ಕಾರಣ ಹೆಚ್ಚಿಗೆ ಆಸ್ತಿ ಕೊಟ್ಟಿರುತ್ತೇನೆಂದು ಬಸಪ್ಪನವರುನನಗೆ ತಿಳಿಸಿರುತ್ತಾರೆ. ನಿಡಿ69 ರಲ್ಲಿನ ಸಂಗತಿಗಳ ಬಗ್ಗೆ

ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ 4 ನೇ ಪ್ರತಿವಾದಿ ಮತ್ತು ಅವರ ಹೆಂಡತಿಯ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಬಸಪ್ಪನವರ ಸಮಕಾಲಿನವರಲ್ಲ ಎಂದರೆ ಸರಿ. 4 ನೇ ಪ್ರತಿವಾದಿಯ ಮಾತನ್ನು ಕೇಳಿ ಅವರಿಗೆ ಅನುಕೂಲ ಮಾಡಿಕೊಡಲು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲು</u>** ಃ 1 ರಿಂದ 3 ನೇ ಪ್ರತಿವಾದಿ ಪರ ವಕೀಲರಿಂದಃ

ಬಸಪ್ಪನವರು ಸುಮಾರು 30-35 ವರ್ಷಗಳಿಂದ ಪರಿಚಯ. ಬಸಪ್ಪನವರ ತಂದೆಯ ಹೆಸರು ಮಲ್ಲೇಗೌಡ. ನನಗೆ ಯಾವ ದಿನಾಂಕದಂದು ನಿಖರವಾಗಿ ವಿಲ್ ನ ಬಗ್ಗೆ ತಿಳಿಸಿದ್ದರು ಎಂದು ನೆನಪಿಲ್ಲ. 4 ನೇ ಪ್ರತಿವಾದಿಯ ಮನೆಯಲ್ಲಿ ಬಸಪ್ಪನವರು ನನಗೆ ವಿಲ್ ನ ಬಗ್ಗೆ ತಿಳಿಸಿರುತ್ತಾರೆ. 2015 ರಲ್ಲಿ ಬಸಪ್ಪನವರು 4 ನೇ ಪ್ರತಿವಾದಿಯ ಮನೆಯಲ್ಲಿ ತರೀಕೆರೆಯಲ್ಲಿ ವಾಸವಿದ್ದರು. ದಿಃ 15.05.2015 ರಂದು ನಾನು 4 ನೇ ಪ್ರತಿವಾದಿಯ ಮನೆಗೆ ಹೋಗಿದ್ದೆನು. ಬಸಪ್ಪನವರು ಆಗ ತನಗೆ ಆರೋಗ್ಯ ಸರಿ ಇಲ್ಲ ಮತ್ತು ಓಡಾಡಲು ಸಾಧ್ಯ ಆಗುತ್ತಿಲ್ಲ ಹಾಗಾಗಿ ವಿಲ್ ಮಾಡಿಸಬೇಕೆಂದು ತಿಳಿಸಿದ್ದರು. ನಾನು ಆ ದಿನ ಸಂಜೆ 04.00-04.30 ರ ಸಮಯದಲ್ಲಿ ಹೋಗಿದ್ದೆ. ಸದರಿ ದಿನಾಂಕ ಯಾವ ವಾರ ಎಂದು ನನಗೆ ಗೊತ್ತಿಲ್ಲ. ಶಾಲೆ ಮುಗಿದ ನಂತರ ನಾನು ಅವರ ಮನೆಗೆ ಹೋಗಿರುತ್ತೇನೆ. ನನ್ನ ಶಾಲೆ ಸಂಜೆ 04.20 ರವರೆಗೆ ಇದೆ. ನಾನು ಅವರ ಮನೆಗೆ ಹೋದಾಗ ಬಸಪ್ಪನವರು ಮಾತ್ರ ಇದ್ದರು. ನಾನು ಸದರಿಯವರ ಮನೆಗೆ ಹೋದಾಗ ಬಾಗಿಲು ಮುಚ್ಚಿದ್ದು ನಾನು ದಬ್ಬಿದಾಗ ತೆರೆದಿರುತ್ತದೆ. ನನಗೆ ಆ ಸಮಯದಲ್ಲಿ ಅಸೆಸ್ಮಂಟ್ ಹಾಗೂ ಪಹಣಿಯನ್ನು ತೋರಿಸಿರುತ್ತಾರೆ. ನಾನು 04.30 ರಿಂದ ಸುಮಾರು ಅರ್ಧ ಗಂಟೆ ಅವರ ಮನೆಯಲ್ಲಿ ಇದ್ದೆ. ಆ ಸಮಯದಲ್ಲಿ ಯಾರು ಮನೆಗೆ ಬಂದಿರಲಿಲ್ಲ. ನಾನು ಪತ್ರ ಬರಹಗಾರರ ಕಚೇರಿಗೆ ಹೋದಾಗ ಎಷ್ಟು ಸಮಯ ಆಗಿತ್ತು ಎಂದು ನನಗೆ ನೆನಪಿಲ್ಲ. ನಾನು ಅವರ ಕಚೇರಿಗೆ ಪಹಣಿ ಮತ್ತು ಅಸೆಸ್ಮಂಟ್ ಅನ್ನು ತೆಗೆದುಕೊಂಡು ಹೋಗಿರುತ್ತೇವೆ. ಸದರಿಯವರ ಕಚೇರಿಗೆ ಸದರಿ ದಾಖಲೆಗಳನ್ನು ಕೊಟ್ಟಿರುತ್ತೇವೆ. ಸದರಿಯವರು ಪೋಮ್ಯನಾಯ್ಕ ರವರನ್ನು ಅವರ ಮನೆಗೆ ಕಳುಹಿಸಿಕೊಟ್ಟಿದ್ದು ಆಗ ಸಮಯ ಎಷ್ಟು ಆಗಿತ್ತು ಎಂದು ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿಯ ಮನೆಗೆ ನಾನು ಪುನಃ ಬಂದಾಗ ಎಷ್ಟು ಸಮಯ ಆಗಿತ್ತು ಎಂದು ನೆನಪಿಲ್ಲ. ನಿಡಿ69 ರ ದಾಖಲೆಗೆ ಮಾಹಿತಿಯನ್ನು ಬಸಪ್ಪನವರು ಕೊಟ್ಟಿರುತ್ತಾರೆ.

ನಿಡಿ69 ರ ಸಂಗತಿಗಳನ್ನು ರಫ್ ಆಗಿ ಬರೆದುಕೊಂಡು ನಂತರ ಅವರ ಕಚೇರಿಯಲ್ಲಿ ಟೈಪ್ ಮಾಡಿಕೊಂಡು ತಂದಿರುತ್ತಾರೆ. ನಂತರ ನಾನು ಕಚೇರಿಗೆ ಹೋಗಿ ಮನೆಗೆ ಹೋಗಿರುತ್ತೇನೆ. ಸದರಿ ದಾಖಲೆಯ ಸಂಗತಿಗಳನ್ನು ಹೇಳಿದಾಗ ಸುಮಾರು ಅರ್ಧ ಗಂಟೆ ನಾನು ಅಲ್ಲಿ ಇದ್ದೆ. ಬಸಪ್ಪನವರು ಸ್ವತಃ ಲಕ್ಷ್ಮೀ ನಾರಾಯಣ್ ರವರ ಕಚೇರಿಗೆ ಹೋಗಿರುವುದಿಲ್ಲ. ದಿಃ 18.05.2015 ರಂದು ಸದರಿ ದಾಖಲೆಯನ್ನು ನಾನು ಉಪ ನೋಂದಣಾಧಿಕಾರಿಗಳ ಕಚೇರಿಗೆ ಹಾಜರುಪಡಿಸಿರುತ್ತೇನೆ.

ಸದರಿ ಬಸಪ್ಪನವರು ನೋಂದಣಿ ಕೆಚೇರಿಗೆ ನಾನು ಹಾಜರಾಗಲು ಸಾಧ್ಯ ಇರುವುದಿಲ್ಲ ಸದರಿ ದಾಖಲೆಯನ್ನು ನೋಂದಣಿಗೆ ಕಳುಹಿಸುತ್ತಿದ್ದೇನೆಂದು ಯಾವುದೇ ಲಿಖಿತ ದಾಖಲೆಯನ್ನು ನೀಡಿರುವುದಿಲ್ಲ. ನಾನು ಅವರ ಪರವಾಗಿ ಅರ್ಜಿಯನ್ನು ಕೊಟ್ಟಿರುತ್ತೇನೆ. ನಾನು 04.30 ಕ್ಕೆ ಸದರಿ ಅರ್ಜಿಯನ್ನು ನೀಡಿದ್ದು ಅವರು 05.30 ಕ್ಕೆ ಮನೆಯಲ್ಲಿ ಇರುವಂತೆ ಹಾಗೂ ತಾನು ಬರುತ್ತಿದ್ದೆನೆಂದು ಹೇಳಿರುತ್ತಾರೆ. ಆ ದಿನ ಉಪ ನೋಂದಣಾಧಿಕಾರಿಗಳು ಸಂಜೆ 05.30 ಕ್ಕೆ ಅವರ ಮನೆಗೆ ಬಂದಿದ್ದರು. ನನ್ನ ಮುಂದೆ ಬಸಪ್ಪನವರು ಯಾವತ್ತು ಸಹ ಈ ರೀತಿ ವಿಲ್ ಮಾಡುತ್ತಿರುತ್ತೇನೆಂದು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ69 ಕ್ಕೆ ನಾನು ಸಹಿ ಮಾಡಿದ ಸಮಯದಲ್ಲಿ ಸದರಿ ಬಸಪ್ಪ ದೋರನಾಳು ಗ್ರಾಮದಲ್ಲಿ 3 ನೇ ಪ್ರತಿವಾದಿಯ ಮನೆಯಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯು ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತೇನೆಂದು ಹೇಳಿ ನಿಡಿ69 ನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಡಿ69 ರ ಸಮಯದಲ್ಲಿ ಅವರ ಆರೋಗ್ಯ ಸರಿ ಇಲ್ಲದಿದ್ದರೂ ಸಹ ನಾನು ಆರೋಗ್ಯ ಸರಿ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸಾಕ್ಷಿ ಅವರಿಗೆ ಮಾತು ಬರುತಿತ್ತು ಕಾಲು ಗ್ಯಾಂಗ್ರಿನ್ ಟೈಪ್ ಆಗಿತ್ತು ಹಾಗೂ ಮಂಡಿ ನೋವು ಇತ್ತು ಎಂದು ನುಡಿಯುತ್ತಾರೆ. ಅವರ ಆರೋಗ್ಯ ಸರಿ ಇದಿದ್ದರೆ ಅವರೇ ಬಂದು ನಿಡಿ69 ನ್ನು ನೋಂದಣಿಗಾಗಿ ಹಾಜರು ಮಾಡುತ್ತಿದ್ದರು ಹಾಗಾಗಿ ನಿಡಿ69 ನ್ನು ನಾವು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರಗಳು ಗೊತ್ತಿದ್ದರು ಸಹ ನಾನು ಸುಳ್ಳು ಸಾಕ್ಷ್ಯವನ್ನುನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ದಿಃ 15.05.2015 ಹಾಗೂ 18.05.2015 ರಂದು ನನ್ನ ಕರ್ತವ್ಯಕ್ಕೆ ನಾನು ರಜೆ ಹಾಕಿರುವುದಿಲ್ಲ. ಹಾಗಾಗಿ ನಾನು ನಿಡಿ69 ನ್ನು ನಾನೇ ಹಾಜರು ಮಾಡಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.

(ಸಂತೋಷ್ ಕುಮಾರ್ ಪಿ. ಎಸ್.)
ಸಿವಿಲ್ ನ್ಯಾಯಾಧೀಶರು ಮತ್ತು ಹೆ.ಪ್ರ.ದ.ನ್ಯಾ.ದಂ.ರವರು,
ತರೀಕೆರೆ.

Case called out.

D/c has filed IA 17 U/Ord 8 R 1(a) of CPC a/w L/Documents. P/c submits no objections to it. Perused IA No.17. IA 17 is allowed on cost of Rs.100/-. L/D taken on record.

Defendant has filed his affidavit in lieu of his chief examination and examined as Dw1 and got marked Ex.D 1 to 4.

P/c prays time for cross of Dw1.

Call on 28.11.2022.

Civil Judge & Addl. JMFC.,
Tarikere.

os

Case called out.

D/c present. P/c Present.

D/c has filed I.A.No.9 and 10 U/Sec.151 of CPC for reopen the case from further evidence of defendant to further chief of DW1.

P/c present. Submitted no objections to I.A. No.9 and 10. Heard. Perused IA No.9 and 10. IA 9 and 10 are allowed on cost of Rs.300/-.

He has also filed IA No.11 U/o.8 Rule 1a R/w sec.151 of CPC seeking permission to file documents along with list.

P/c present. Submitted no objections to I.A. No.11. Heard. Perused IA No.11. IA 11 is allowed on cost of Rs.200/-.

L/D taken on record.

He has also filed IA No.12 U/Ord.16 rule 1 and 2 of CPC for accord permission to produce the list of witness a/w list of witness.

Plaintiff counsel submits no objection to allow IA No.12. Heard. Perused. IA 12 is allowed on cost of Rs.100/-.

List of witness taken on record.

Dw1 present and further examined in chief.

Ex.D9 to 11 are marked.

P/C prays time.

For cross of Dw1.

OS 65/2016

Call on 02.01.2023.

Civil Judge & Addl. JMFC.,
Tarikere.